ತಾರೀಖು 12ನೇ ಮೇ 1903.

ನಂ. ರೆ. 4202—ರೆ. ಫೈ. 39–1902, ಹುಣಸೂರ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಗುಲಾಂಮೊಹದ್ದೀಖಾ ಯವರು ಇತರ ಕೆಲಸದಮೇಲಿರುವ ಕಾಲದಲ್ಲಿ ಇದರಿಂದ ಕಂಡ ಆಕ್ಟ್ಯಿಂಗು ಏರ್ಪಾಡುಗಳು ಮಾಡಲ್ಪಟ್ಟಿರುತ್ತವೆ :—

(1) ಫ್ರೆಂಚ್‌ರಾಕ್ಸಿನ ಡೆಪ್ಯುಟಿ ಅಮಲ್ದಾರ್ರಾದ ಪೀಕ್ ಅಬ್ದುಲ್ಲಾ ಯವರು ಹುಣಸೂರ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸು ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡತಕ್ಕದ್ದು.

(2) ಮೈಸೂರ ಡೆಪ್ಯುಟಿ ಕಮಿಷನರವರ ಆಫೀಸಿನ ಹೆಡ್ ಕ್ಲಾರ್ಕರಾದ ಟಿ. ದೊರಸಾಮಿಪಿಳ್ಳೈ ಯವರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ಮೂರನೇ ಕ್ಲಾಸು ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡತಕ್ಕದ್ದು.

ತಾರೀಖು 14ನೇ ಮೇ 1903.

ನಂ. ರೆ. 4215—ರೆ. ಫೈ. 49—97, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಹಾಸನದ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಜಿ. ಆರ್. ಶ್ರೀನಿವಾಸಯ್ಯಂಗಾರ್ರಿಗೆ 1903ನೇ ಏಪ್ರಿಲ್ 20ನೇ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾಲ್ಲೂಕು ಷಿರಿಸ್ತೇದಾರ್ರು, ಸದರೀ ಅಮಲ್ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 14ನೇ ಮೇ 1903.

ನಂ. ರೆ. 4218—ರೆ. ಫೈ. 119—95, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಬಿ. ರಾಮಸ್ವಾಮಯ್ಯನವರಿಗೆ 1903ನೇ ಏಪ್ರಿಲ್ 25ನೇ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

(2) ತಾಲ್ಲೂಕು ಷಿರಿಸ್ತೇದಾರ್ರಾದ ಸೂರ್ಯನಾರಣಪ್ಪನವರು ಸದರೀ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರವರ ಅಧಿಕಾರಗಳೊಡನೆ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 15ನೇ ಮೇ 1903.

ನಂ. ಫೈ. 1984—ರೆ. ಫೈ. 44—02–03, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಅಕೌಂಟ್ ಪ್ರೊಬೇಷನರಾದ ಮೆ॥ ಎಲ್. ಭಿಮ್ಶೈಪಂತ್ ಬಾದಾಮಿ ಯವರಿಗೆ 1903ನೇ ಮೇ ಗುರೈ ತಾರೀಖಿನಾರಭ್ಯ 9 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬವೋಜೇಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಫಾರೆಸ್ಟ್.

ಇನ್ಸ್ಟ್ರಾರ್ನಾಮೆ.

ತಾರೀಖು 12ನೇ ಮೇ 1903.

ನಂ. 709—6995, ಸ 1902ನೇ ಅಕ್ಟೋಬರ್ 17ನೇ ಮತ್ತು ನಂ 254—1887ನೇ ನಂಬರ್ ಇನ್ಸ್ಟ್ರಾರ್ನಾಮೆಯನ್ನು ಬದಲಾಯಿಸೋಣವರಲ್ಲಿ, ಕಡೂರು ವ ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾದ ಮೆ॥ ಬಿ. ರಾಮಸ್ವಾಮಿ ಅಯ್ಯರ್ ಯವರು ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 4ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸಲ್ಪಟ್ಟ ಹಾಸನದ ಡಿಸ್ಟ್ರಿಕ್ಟಿನ ಫಾರೆಸ್ಟ್ಟುಗಳ ವಿಷಯವಾಗಿ ಸೆಟ್ಲ್‌ಮೆಂಟ್ ಆಫಿಸರರಾಗಿ ಸಹಾ ಪೊಕರರ್ಮಾಡಲ್ಪಟ್ಟಿರುತ್ತಾರೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮರ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ಹುಕುಂ ಬವೋಜೇಬ್,
ಜಿ. ಇ. ರಿಕೆಟ್ಸ್,
ಫಾರ್ ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಾರ್ನಾಮಾ.

ತಾರೀಖು 18ನೇ ಮೇ 1903.

ನಂ. 494—2618, ಸ 1903ನೇ ಏಪ್ರಿಲ್ 29ನೇ ಮತ್ತು ನಂ 436—2300ನೇ ನಂಬರ್ ಈ ಆಫೀಸಿನ ಇನ್ಸ್ಟ್ರಾರ್ನಾಮೆಗೆ ಬದಲಾಗಿ ಇಂಪೀರಿಯಲ್ ಎರಡನೇ ಗ್ರೇಡಿನ ಎಗ್ಸಿಕ್ಯೂಟಿವ್ ಇಂಜನಿಯರ್ ಮತ್ತು ಪಶ್ಚಿಮ ಸರ್ಕಲಿನ ಅಫೀಷಿಯೇಟಿಂಗ್ ಸೂಪರ್‌ಟೆಂಡಿಂಗ್ ಇಂಜನಿಯರಾದ ಕ್ಯಾಪ್ಟನ್ ಎ. ಜೆ. ಡೀಲಾಬಿನಿಯರ್, ಆರ್. ಇ., ಯವರಿಗೆ ಮಾಹೆ ಗುಜಸ್ತ 25ನೇ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬವೋಜೇಬ್,
ಡಬ್ಲ್ಯೂ. ಎಸ್. ಟ್ರೀಲ್, ಕ್ಯಾಪ್ಟನ್ ಆರ್. ಇ.,
ಫಾರ್ ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಸೆಕ್ರೆಟರಿ.